ಹರಳಹಳ್ಳಿ ಪುಟ್ಟರಾಜು, ಪಾಂಡವಪುರ
*ಕೆಲವು ತರುಣಿಯರು ಮದುವೆಯಾದ ಮೇಲೆ ದಪ್ಪವಾಗಲು ಕಾರಣವೇನು?*




ತಮ್ಮ ಕೆಲಸಗಳನ್ನು ಮಾಡಿಕೊಡಲು ಒಬ್ಬ ಆಳು ದೊರೆತುದರಿಂದ ದೊರೆತ ನೆಮ್ಮದಿ, ವಿಶ್ರಾಂತಿ!

ಎಸ್.ಲಕ್ಷ್ಮೀನರಸಿಂಹ, ಚಾಮರಾಜನಗರ
*ನೀವು ಮದುವೆ ಮನೆಗೆ ಹೋದಾಗ ಯಾವ ರೀತಿ ಸಂತಸ ಪಡುತ್ತೀರಿ?*
ಕೊಟ್ಟ ಉಡುಗೊರೆಗಿಂತ ಹೆಚ್ಚಿನ ಬೆಲೆಯ ತಿಂಡಿ, ಊಟ, ತಾಂಬೂಲ ಸಿಕ್ಕಿತಲ್ಲ ಎಂದು!

ಪಿ.ಜೆ.ರಾಘವೇಂದ್ರ, ಮೈಸೂರು
*ಜೆಡಿಎಸ್‌ನವರು ಹೊರೆಯನ್ನು ಮಹಿಳೆಗೇ ಹೊರಿಸಿದ್ದು ಏಕೆ?*
ಕಾಂಗ್ರೆಸ್‌ಗೆ ಹೋಲಿಸಿದರೆ ಇವರೇ ವಾಸಿ– ಇವರು ಹೊರಿಸಿದ್ದು ಕೇವಲ ಹುಲ್ಲಿನ ಹೊರೆ, ಅವರ ಹೊರಿಸಿದ್ದು full ಹೊರೆ!

ಎನ್.ಎಸ್. ಆನಂದ್, ಬೆಂಗಳೂರು
*ಗೆಳೆಯನೊಬ್ಬ ಆಟ ತಿಳಿಯದಿದ್ದರೂ ಮಹಿಳೆಯರ ಟೆನಿಸ್ ತಪ್ಪದೆ ವೀಕ್ಷಿಸುತ್ತಾನಲ್ಲಾ...?*
ಲವ್ ಫಿಫ್ಟೀನ್, ಲವ್ ಥರ್ಟಿ, ಲವ್ ಆಲ್ ಎನ್ನುತ್ತಿರುತ್ತಾರಲ್ಲಾ, ಇವನನ್ನೂ ಯಾರಾದರೂ ಲವ್ ಮಾಡುವರೇನೋ ಎಂಬ ದೂರದ ದುರಾಸೆಯಂತೆ!

ಮಹಾಲಿಂಗ ಎಂ. ಗೋರಬಾಳ
*ಟಿವಿ ಮಾಧ್ಯಮ ಜನರ ಮೇಲೆ ಯಾವ ರೀತಿಯ ಪರಿಣಾಮ ಬೀರಿದೆ?*




ಬೆಳಗಾಗೆದ್ದು ಜಾಗಿಂಗ್ ಮಾಡುವುದನ್ನು ನೋಡುತ್ತಾ ಕುಳಿತು ದಪ್ಪವಾಗುವಂತಹ ಪರಿಣಾಮ!

ಓಂ ಚನ್ನೇಶ್, ಅರಬಿಳಚಿ ಕ್ಯಾಂಪ್
*ಭಾವನೆಗಳನ್ನು ಹಂಚಿಕೊಳ್ಳಲು ಮಡದಿ, ಪ್ರೇಯಸಿಯರಲ್ಲಿ ಯಾರು ಉತ್ತಮ?*
ಪ್ರೇಯಸಿಯೇ. ಮಡದಿಯೊಡನೆ ಹಂಚಿಕೊಳ್ಳುವ ಅಗತ್ಯವೇ ಇರುವುದಿಲ್ಲ – ನಿಮ್ಮ ಹ್ಯಾಪ್‌ಮೋರೆ ನೋಡಿದ ತಕ್ಷಣ ತಿಳಿದುಬಿಡುತ್ತದೆ!

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ
*ಒಂದು ವೇಳೆ ಈಗಿನ ಕಾಲದಲ್ಲಿಯೂ ಪಂಚಪಾಂಡವರಂತಹ ಮಂದಿ ಇದ್ದಿದ್ದರೆ?*
ಧರ್ಮರಾಯ casino, ಭೀಮ wwf, ಅರ್ಜುನ ಆರ್ಚರಿ ಟೂರ್ನಿಗಳನ್ನು ನಡೆಸುತ್ತಿದ್ದರು, ನಕುಲ ಸ್ಟಡ್ ಫಾರ್ಮ್ ಇಡುತ್ತಿದ್ದ, ಸಹದೇವ ಡೈರಿ ಮಾಲೀಕನಾಗುತ್ತಿದ್ದ.

ಬಿ.ಎಂ.ಪರಶಿವಮೂರ್ತಿ, ಬೆಂಗಳೂರು
*ಯೋಚಿಸುವುದಕ್ಕೂ, ಯಾಚಿಸುವುದಕ್ಕೂ ವ್ಯತ್ಯಾಸವೇನು ರಾಮ್‌ಜಿ?*
ಒಂದರಿಂದ ಮನ ಹಾಳು, ಇನ್ನೊಂದರಿಂದ ಮಾನ ಹಾಳು!

ಪೇಂಟರ್ ಪಾಪು, ಸಂತೇಮರಹಳ್ಳಿ
*ಮಾತಿಗೆ ಬೆಲೆ ಇದೆ ಎಂದ ಮೇಲೆ ಮಾತನಾಡುವ ನಾಲಿಗೆಗೂ ಬೆಲೆ ಇದ್ದೇ ಇರುತ್ತದೆ ಅಲ್ಲವೆ?*
ಮಾತು ಕಾರು, ನಾಲಿಗೆ ಟೈರು. ಕಾರಿನ ಬೆಲೆ ಕಾರಿಗೆ, ಟೈರಿನ ಬೆಲೆ ಟೈರಿಗೆ!

ಶೋಭಾ ಎಂ.ಆರ್. ಹಾಸನ
*ಗೆಳೆಯನೊಬ್ಬ ಫೋನಿನಲ್ಲಿ ಮಾತನಾಡುವಾಗ ಪದೇ ಪದೇ ಮತ್ತೇನು ಅಂತ ಕೇಳುತ್ತಾನಲ್ಲಾ ರಾಮ್‌ಜೀ...?*
ನಿಮ್ಮದೇ ತಪ್ಪು; ನೀವೇಕೆ ಪದೇ ಪದೇ ಮತ್ತಿನಲ್ಲಿರುವವರಂತೆ ಮಾತನಾಡುವುದು?

ಎಸ್.ಆರ್. ಶ್ರೇಯಸ್, ಮೈಸೂರು
*ದೂರದ ಸೂರ್ಯದೇವನಿಗೆ ನಮಸ್ಕರಿಸುವ ಜನ ಹತ್ತಿರವೇ ಇರುವ ತಂದೆ ತಾಯಿಗಳಿಗೆ, ಗುರುಗಳಿಗೆ ನಮಸ್ಕರಿಸುವುದಿಲ್ಲವಲ್ಲ...?*
ಸರಿಯೇ; ಸೂರ್ಯದೇವ ದೂರದವನು, ಇವರೆಲ್ಲಾ ದೂರುವವರು!

ನೇ.ಗೋ.ಭ. ಕುಕ್ಕೆ ಸುಬ್ರಹ್ಮಣ್ಯ
*ಮಹಾಭಾರತ ಬರೆದ ಕುಮಾರವ್ಯಾಸನಿಗೆ ಹಲಗೆ ಬಳಪವ ಪಿಡಿಯದೊಂದಗ್ಗಳಿಕೆಯಂತೆ; ನಿಮಗೆ ಎಂತಹ ಅಗ್ಗಳಿಕೆ ರಾಮ್‌ಜೀ?*
ನನ್ನದೂ ಅದೇ ಅಗ್ಗಳಿಕೆಯೇ! ನಾನು ಹಿಡಿದದ್ದೇ ನೋಟ್‌ಬುಕ್ಕು, ಪೆನ್ನಿಲ್ಲು!

ವಿ. ಹಮೀದ್, ವಿಟ್ಲ
*ತಾಯಿಗಿಂತ ದೇವರಿಲ್ಲ. ಪ್ರೇಯಸಿಗಿಂತ?*
ಮಾಧುರ್ಯವಿಲ್ಲ.

## ಬಹುಮಾನಿತ ಪ್ರಶ್ನೆ

ಪದ್ಮಾ ರಾಮನಾಥ್, ಶಾಸ್ತ್ರಿನಗರ
*ರಮಣ ಬಹುಗುಣ ಆದಾಗಿಂದ ಸಿಗೋದಿಲ್ಲ ಅನುಕ್ಷಣ; ಮನಸ್ಸು ಭಣಭಣ. ಬೇಡ ಪುರಾಣ, ಬರಲಿ ಸಲಹೆ ತಕ್ಷಣ...!?*
ಜೀವನದಲ್ಲಿ ಇದ್ದದ್ದೇ ಆರೋಹಣ–ಅವರೋಹಣ ನಿರೀಕ್ಷಣ; ಸಿಕ್ಕ ಚಿಕ್ಕ ಚಿಕ್ಕ ಕ್ಷಣ ಇರಲಿ ಮಧುರ, ಬೇಡ ರಣ!

ಆರಿಫ್, ದಾವಣಗೆರೆ
*ಪ್ರೀತಿಯ ವಿಷಯದಲ್ಲಿ ಹುಡುಗರಿಗಿಂತಾ ಹುಡುಗಿಯರಲ್ಲಿಯೇ ಸ್ವಾರ್ಥ ಭಾವನೆ ಹೆಚ್ಚು, ಏಕೆ?*
ನಿಸ್ವಾರ್ಥವಾಗಿ ಪ್ರೀತಿಸಿದರೆ ದಿನಕ್ಕೊಬ್ಬ ಹುಡುಗ ಕೈಕೊಡುವನೆಂಬ ಅರಿವಿರುವುದರಿಂದ.

ಸಾವಿತ್ರಮ್ಮ ಕೆ. ವಿಭೂತಿ, ಹರಿಹರ
*ಮರ್ಕಟಮನಸ್ಸಿನ ನಿಯಂತ್ರಣ ಮಾಡದೆ ಶಿಕ್ಷಣದಿಂದ ಎಂತಹ ಸಮಾಜ ಕಟ್ಟಲು ಸಾಧ್ಯ?*
ಇಲ್ಲೇ ನಾವು ಎಡವುತ್ತಿರುವುದು. ಶಿಕ್ಷಣ ಎಂದರೆ ಸರ್ಟಿಫಿಕೇಟ್ ಅಲ್ಲ, ಮನದ ಇಳೆಯ ಹಸನು ಮಾಡಿ ಗುಣದ ಬೆಳೆಯ ಫಸಲು ಪಡೆಯುವುದು.

ಎಚ್.ಆನಂದಕುಮಾರ್, ಚಿತ್ರದುರ್ಗ
*ಭಯೋತ್ಪಾದಕರಿಗೂ, ಕಾಮೋತ್ಪಾದಕರಿಗೂ ಇರುವ ವ್ಯತ್ಯಾಸವೇನು?*



ಇಬ್ಬರೂ ಶೂಟ್ ಮಾಡುತ್ತಾರೆ. ಆದರೆ ಇವರು ಗನ್ ಬಳಸುತ್ತಾರೆ, ಅವರು ಕ್ಯಾಮೆರಾ!

ಎಂ.ಎಸ್. ಸೋಮಶೇಖರ್, ಮೈಸೂರು
*ವಂದರಿಗೂ, ಸುಂದರಿಗೂ ಏನು ವ್ಯತ್ಯಾಸ?*
ವಂದರಿಯಿಂದ ಸೊಗಸಾದ ಹಿಟ್ಟು, ಸುಂದರಿ super hitಉ!

ಮಲ್ಲಿಕಾರ್ಜುನ ಹ. ಬಗಲಿ, ಜತ್ತ
*ವಿವಾಹ ಸಮಯದಲ್ಲಿ ಹೆಣ್ಣು ಸಪ್ತಪದಿಯನ್ನು ತುಳಿಯುವುದೇಕೆ?*
ವಾರದ ಏಳೂ ದಿನವೂ ಪತಿಯನ್ನು ಹೀಗೆಯೇ ತುಳಿಯುವೆನೆಂದು ಭಾಷೆ ಕೊಡುವ ಕ್ರಮವದು!

ಎಚ್. ಸಿದ್ಧಾರ್ಥ ಹೆಬ್ಬಾರ್, ಈದು
*ಯಾರಿಗೂ ಗೊತ್ತಿರದ ಒಂದೇ ಒಂದು ಸಂಗತಿ ಯಾವುದು?*
ತಮ್ಮ ಬೆನ್ನಿನಲ್ಲಿ ಆ ದಿನ ಎಷ್ಟು ಕೊಳೆ ಸೇರಿದೆ ಎಂಬುದು!

■ ರಾಮ್